Allotment of Funds by the Centre towards Development and Construction of National Highways

68. Sri L. SRIKANTIAH (Nanjangud).—

Will the Minister for Public Works be pleased to state :—

(*a*) the amount sanctioned or allotted by the Centre to the State towards the development and construction of National Highways during 1967-68, 1968-69 and 1969-70 ;

(*b*) the amount utilised towards the same by the State Government during the said year ;

(*c*) whether the Government has any proposal to convert (i) Bangalore-Ooty Road and (ii) Bangalore-Cannanore Road into National Highways ?

Sri K. LAKKAPPA (Minister for Public Works).—

(*a*)—

1967-68		*1968-69*		*1969-70*	
Original Grants	Final Grants	Original Grants	Final Grants	Original Grants	Final Grants
		(Rupees in lakhs)			
16·00	27·775	35.00	29·365	26·37	20.289

(*b*)—

1967-68	*1968-69*	*1969-70*
Expenditure Rs. in lakhs	Expenditure Rs. in lakhs	Expenditure Rs. in lakhs
27.11	22.37	18.85

(*c*) (i) Yes.

(ii) Portion of Bangalore-Cannanore Road from Bangalore-Mysore up to Hunsur has been proposed for inclusion in Bangalore-Mysore-Mercara-Mangalore Road as a National Highway.

ಶ್ರೀ ಎಲ್. ಶ್ರೀಕಂಠಯ್ಯ.—(ಸಿ) ಪ್ರಶ್ನೆಗೆ 'ಹೌದು' ಎಂದು ಉತ್ತರವನ್ನು ಹೇಳಿದೆ. ಅಂದರೆ ಬೆಂಗಳೂರು—ಊಟಿ ರಸ್ತೆಯ ಪ್ಲಾನ್ ಮತ್ತು ಅಂದಾಜುಗಳನ್ನು ಸಿದ್ಧಪಡಿಸಲಾಗಿದೆಯೇ ಮತ್ತು ಅದಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ ಮತ್ತು ಅದರಲ್ಲಿ ಖರ್ಚಾಗಿರತಕ್ಕ ಹಣವೆಷ್ಟು ಮತ್ತು ನಂಜನಗೂಡಿನ ಬಳಿ ಇರತಕ್ಕ ಕರ್ವನ್ನು ತಪ್ಪಿಸಲು ಪ್ರಯತ್ನ ಮಾಡಲಾಗಿದೆಯೇ ?

† ಶ್ರೀ ಕೆ. ಲಕ್ಕಪ್ಪ.—ಮೈಸೂರು-ಗೂಟಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಆಗಿ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಲಾಗಿದೆ. ಅವರ ಅಂಗೀಕಾರ ಇನ್ನೂ ದೊರೆತಿಲ್ಲ. ಆದ್ದರಿಂದ ಆ ರಸ್ತೆ ಇನ್ನೂ ಸ್ಟೇಟ್ ಹೈವೇಯಾಗಿಯೇ ಇದೆ. ಇನ್ನು ನಂಜನಗೂಡಿನ ಬಳಿ ಒಂದು ಸೇತುವೆ ಆಗಬೇಕೆಂದು ಮಾನ್ಯ ಸದಸ್ಯರೂ ಮತ್ತು ಕೆಲವು ಅಲ್ಲಿನ ಪ್ರಮುಖರೂ ಬಂದು ನನ್ನಲ್ಲಿ ತಿಳಿಸಿದರು. ಆ ಬಗ್ಗೆ ಕೇಂದ್ರಕ್ಕೆ ಬರೆದು ಅವರ ಅನುಮತಿಯನ್ನು ಪಡೆಯಲಾಗಿದೆ. ಟೆಂಡರನ್ನು ಕರೆದಿದೆ. ಕೆಲಸ ಪ್ರಾರಂಭವಾಗಿದೆ.

ಶ್ರೀ ಎಂ. ನಾಗಪ್ಪ.—ಇಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದ್ದಿತೋ ಅಷ್ಟನ್ನೂ ಕೂಡ ಖರ್ಚು ಮಾಡುವುದಕ್ಕೆ ಆಗದೆ ಹಣವನ್ನು ಉಳಿಸಿರುವುದನ್ನು ನೋಡಿದರೆ ಪಿ. ಡಬ್ಲೂ. ಡಿ. ಇರಾಖೆ ಅದಕ್ಷತೆಯಿಂದ ಕೂಡಿದ್ದಾಗಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆಯಲ್ಲವೇ?

ಶ್ರೀ ಕೆ. ಲಕ್ಕಪ್ಪ.—ಕೆಲವು ಕಡೆ ಭೂಮಿಯನ್ನು ಅಕ್ವಯಿರ್ ಮಾಡಿಕೊಂಡು ಕೆಲಸವನ್ನು ನಡೆಸಬೇಕಾಗಿದ್ದ ಕಾರಣ ಭೂಮಿಯನ್ನು ಸಕಾಲಕ್ಕೆ ಅಕ್ವಯಿರ್ ಮಾಡುವುದಕ್ಕಾಗಲಿಲ್ಲ. ಮತ್ತು ಕೇಂದ್ರ ಸರ್ಕಾರದಿಂದ ಅಂಗೀಕೃತವಾದ ಡಿಸೈನ್‌ಗಳು ಬರುವುದಕ್ಕೂ ಸ್ವಲ್ಪ ನಿಧಾನವಾದ್ದರಿಂದ ಹಣ ಖರ್ಚಾಗದೆ ಉಳಿಯಿತು. ಅದಕ್ಕೆ ಅದಕ್ಷತೆ ಕಾರಣವಲ್ಲ. ಆದ್ದರಿಂದ ಮಾನ್ಯ ಸದಸ್ಯರ ಟೀಕೆ ನಿರಾಧಾರವಾದದ್ದು. ಕೆಲವು ಕಡೆ ಸೇತುವೆಗಳನ್ನು ಕಟ್ಟತಕ್ಕ ಕಡೆಗಳಲ್ಲಿ ಟ್ಯೂಬ್ ಹಾಕಿ ಕಟ್ಟಬೇಕಾಗಿ ಬಂದ ಕಾರಣ ಅದರಿಂದಲೂ ಕೆಲಸ ನಿಧಾನವಾಯಿತು. ಈ ಎಲ್ಲ ಕಾರಣಗಳಿಂದ ಹಣ ನಿರೀಕ್ಷಿಸಿದ್ದ ಮಟ್ಟದಲ್ಲಿ ಖರ್ಚಾಗಲಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಯಾವ ಯಾವ ರಸ್ತೆಗಳನ್ನು ನ್ಯಾಷನಲ್ ಹೈವೇ ಮಾಡಲು ಕೇಂದ್ರಕ್ಕೆ ಶಿಫಾರ್ಸನ್ನು ಮಾಡಿದ್ದಾರೆ, ಅವುಗಳಲ್ಲಿ ಕೇಂದ್ರದ ಅಂಗೀಕಾರ ಎಷ್ಟಕ್ಕೆ ಸಿಕ್ಕಿದೆ, ಮತ್ತು ಅವುಗಳ ಬಗ್ಗೆ ಇದುವರೆಗೂ ಖರ್ಚಾಗಿರತಕ್ಕ ಹಣವೆಷ್ಟು?

ಶ್ರೀ ಕೆ. ಲಕ್ಕಪ್ಪ.—ಸರ್ಕಾರದವರು ಹಾಲ 818 ಮೈಲಗಳಷ್ಟು ರಸ್ತೆಯನ್ನು ನ್ಯಾಷನರ್ ಹೈವೇಯಾಗಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಅವುಗಳು ಯಾವುವೆಂದರೆ—ಒಂದು ಮದ್ರಾಸ್-ಬೆಂಗಳೂರು ಮಾರ್ಗವಾಗಿ ಹುಬ್ಬಳ್ಳಿ, ಧಾರ್ವಾಡ, ಪೂನಾಕ್ಕೆ ಹೋಗತಕ್ಕ ರಸ್ತೆ, ಎರಡನೆಯದು: ಚಿತ್ರದುರ್ಗ ಮತ್ತು ಸೋಪಾಪುರ ರಸ್ತೆ. ಮೂರನೆಯದು: ಕೃಷ್ಣಗಿರಿ ಮತ್ತು ಮದ್ರಾಸ್ ರಸ್ತೆ. ನಾಲ್ಕನೆಯದು ಹಿಂದೂಪುರದ ಮಾರ್ಗ. ಇವುಗಳಿಗೆ ಕೇಂದ್ರದವರು ಕೊಟ್ಟಿದ್ದ ಹಣವೆಲ್ಲಾ ಖರ್ಚಾಗಿದೆ. ಇದಕ್ಕಿಂತ ಹೆಚ್ಚಿನ ವಿವರಗಳು ಸಧ್ಯಕ್ಕೆ ನನ್ನಲ್ಲಿಲ್ಲ.

Sri N. G. HALAPPA.—The Minister was pleased to state that one of the causes is the question of land acquisition. Are the Government in a position to state specific cases where the delay was due to land acquisition?

Sri K. LAKKAPPA.—I have got information but that is a big list. However I will mention some specific instances. ತಾನ್ ಎಂಬಿ ಒಂದು ಸೇತುವೆಯನ್ನು, ಕಟ್ಟತಕ್ಕ ಸಂದರ್ಭದಲ್ಲಿ ಭೂಮಿಯನ್ನು ಅಕ್ವಯಿರ್ ಮಾಡಬೇಕಾಯಿತು. ಅಲ್ಲಿ ಕೊಂದರೆ ಬಂದಿತು. ಅದರಿಂದಾಗಿ ಹಣವನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಮತ್ತು ನಾನಾಗಲೇ ಹೇಳಿದಂತೆ ಕೇಂದ್ರದಿಂದ ಡಿಸೈನ್ ಅಪ್ರೂವಾಗಿ ಬರುವುದರಲ್ಲೂ ನಿಧಾನವಾಯಿತು. ಆದ್ದರಿಂದ ಕೆಲಸ ನಿಧಾನವಾಯಿತು.

ಶ್ರೀ ಜಿ. ರಾಮೇಗೌಡ.—ಕೇಂದ್ರದವರು ಈ ಬಗ್ಗೆ ನೀವು ಕೇಳಿದಷ್ಟು ಹಣವನ್ನು ಕೊಡುತ್ತಾರೊ ಅಥವಾ ಇವರ ಇಷ್ಟ ಬಂದಹಾಗೆ ಹಣವನ್ನು ಮಂಜೂರು ಮಾಡುತ್ತಾರೋ?

ಶ್ರೀ ಕೆ. ಲಕ್ಕಪ್ಪ.—ಅವರು ಲಂಪ್‌ಸಂ ಆಗಿ ಇಷ್ಟು ಎಂದು ಕೊಡುತ್ತಾರೆ ಅಷ್ಟೆ.

ಶ್ರೀ ಎಲ್. ಶ್ರೀಕಂಠಯ್ಯ.—ಪ್ರಶ್ನೆಯ (ಸಿ) ಭಾಗದ (2) ನೇ ಉತ್ತರದಲ್ಲಿ

(ii) Portion of Bangalore–Cannanore Road from Bangalore–Mysore up to Hunsur has been proposed for inclusion in Bangalore–Mysore–Mercara–Mangalore Road as a National Highway.

ಎಂದು ಹೇಳಲಾಗಿದೆ. ಇದನ್ನು ನೋಡಿದರೆ ಹುಣಸೂರಿನವರೆಗೆ ಸೇರಿತ್ತು ಎಂದು ತೋರುತ್ತೆ. ಆದರೆ ಸರಕಾರ ಕೇಂದ್ರಕ್ಕೆ ಕಳುಹಿಸುವಾಗ ಪಟ್ಟಿಯಲ್ಲಿ ಬಿಟ್ಟುಹೋಯಿತು ಎಂದು

ತಿಳಿದುಕೊಳ್ಳೋಣವೇ ? ಸರಕಾರಕ್ಕೆ ಇದನ್ನು ಕಳುಹಿಸುವ ಉದ್ದೇಶವಿಲ್ಲ ಎಂದು ಕೈ ಬಿಡರಾಯಿತೇ ! ಹಾಗೆ ಕಳುಹಿಸದೇ ಇದ್ದರೆ ಈಗಲಾದರೂ ಇದರ ಪ್ರಪೋಸರ್‌ನ್ನು ಕಳುಹಿಸುವ ವ್ಯವಸ್ಥೆ ಮಾಡುತ್ತಾರೆಯೇ ?

†ಶ್ರೀ ಕೆ. ಲಕ್ಕಪ್ಪ.—ಇದುವರೆಗೆ ಈ ಪ್ರಪೋಸರ್‌ನ್ನು ಕಳುಹಿಸಿಲ್ಲ. ಈಗಾಗಲೇ ಹತ್ತು ರಸ್ತೆಗಳ ಪ್ರಪೋಸರ್‌ನ್ನು ಕಳುಹಿಸಲಾಗಿದೆ. ಇದರ ಬಗ್ಗೆ ಕೇಂದ್ರ ಸರಕಾರ ಇನ್ನೂ ಯಾವುದನ್ನು ಡಿಕ್ಲೇರು ಮಾಡಿಲ್ಲ. ಕೇಂದ್ರದವರು ಯಾವುದನ್ನು ತೆಗೆದುಕೊಳ್ಳುತ್ತಾರೆ. ಅದನ್ನು ಡಿಕ್ಲೇರ್ ಮಾಡಿದಮೇಲೆ ಅನಂತರ ಇತರ ಮುಖ್ಯ ರಸ್ತೆಗಳ ಬಗ್ಗೆ ಪ್ರಪೋಸರ್‌ನ್ನು ಕಳುಹಿಸುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀರ್.—ಸೆಂಟ್ರಲ್ ಗವರ್ನಮೆಂಟಿನವರು 67-68ರಲ್ಲಿ 27 ಲಕ್ಷ 68-69ರಲ್ಲಿ 35 ಲಕ್ಷ ಮತ್ತು 69-70ರಲ್ಲಿ 25 ಲಕ್ಷ ಚಿಲ್ಲರೆ ಹಣ ಕೊಟ್ಟಿದ್ದರೂ ನಮ್ಮ ಸರಕಾರ ಈ ರಸ್ತೆಗಳ ನಿರ್ಮಾಣಕ್ಕೆ ಹಣ ಖರ್ಚು ಮಾಡುವುದರಲ್ಲಿ ವಿಫಲರಾಗಿದ್ದಾರೆ. ಮತ್ತು ಈ ಸರಕಾರಕ್ಕೆ ಕೊಟ್ಟ ಹಣವನ್ನು ಪೂರ್ತಿ ಖರ್ಚುಮಾಡಲು ಆಗಲಿಲ್ಲ ಎನ್ನುವುದನ್ನು ಒಪ್ಪುತ್ತಾರೆಯೇ !

ಶ್ರೀ ಕೆ. ಲಕ್ಕಪ್ಪ.—ಇಲ್ಲಿ ಕೊಟ್ಟಿರುವ ಅಂಕೆಗಳ ಪ್ರಕಾರ 69-70 ನೇ ಸಾಲಿನಲ್ಲಿ ಅವರು ಕೊಟ್ಟ ಹಣದಲ್ಲಿ ಪೂರ್ತಿ ಖರ್ಚು ಮಾಡಲಾಗಲಿಲ್ಲ. ಇದರಲ್ಲಿ ಒಂದು ಲಕ್ಷದಷ್ಟು ಹಣ ಖರ್ಚು ಮಾಡಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ನಾನಾಗಲೇ ಹೇಳಿದ ಹಾಗೆ ರ್ಯಾಂಡು ಅಕ್ವಿಸಿಷನ್ ಹಾಗೂ ಇನ್ನಿತರ ತೊಂದರೆಗಳಿಂದ ಆಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಇದನ್ನು ಮುಚ್ಚುವಂತಹ ಸ್ಥಿತಿ ಬಂದಿದ್ದು ನಿಜವಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಸಾಕಷ್ಟು ಹಣ ಇಲ್ಲ ಎಂದು ಯಾವ ಕೆಲಸವನ್ನೂ ನಿಲ್ಲಿಸಿಲ್ಲ. ಕೆಲಸ ಪೂರ್ತಿ ಮಾಡಲು ಎಷ್ಟು ಹಣ ಬೇಕೋ ಅದನ್ನು ಒದಗಿಸಲೂ ಸಾಧ್ಯವಾಗಿದೆ. ಕೆಲವು ಕಡೆಗಳಲ್ಲಿ ಹಣ ಸಾಕಾಗದೆ ಇದ್ದರೂ ಬಡ್ಜೆಟ್ಟನ್ನು ಮೀರಿ ಹಣ ಕೊಡಲಾಗಿದೆ. ಮತ್ತು ಕೆಲಸಗಳನ್ನು ಮಾಡಿಯಾಗಿದೆ. ಎಲ್ಲೋ ಕೆಲವು ವಿಶೇಷ ಸಂದರ್ಭಗಳಲ್ಲಿ ನಿಗದಿ ಮಾಡಿರುವ ಹಣ ರ್ಯಾಪ್ಸ್ ಆಗುತ್ತದೆ. ಆದರೆ ನಮಗೆ ಕೊಟ್ಟಿರುವ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುತ್ತಿದ್ದೇವೆ ಮತ್ತು ಅದರಂತೆ ಕೆಲಸಗಳೂ ಆಗುತ್ತಿವೆ.

Sri G. CHANDRAKANTH.—It was stated by the Hon. Minister that Government was not in a position to spend the amount because of Land acquisition. I would like to know whether this reply was given only with the intention of misleading the House or whether he is ignorant of the facts ?

ಶ್ರೀ ಕೆ. ಲಕ್ಕಪ್ಪ.—ನಾನಾಗಲೆ ಹೇಳಿದಂತೆ ಇಲ್ಲಿ ನಿಮಗೆ 21 ವಿಚಾರಗಳ ಒಂದು ಪಟ್ಟಿಯಲ್ಲಿ ಹೇಳಿರುವಂತೆ ರ್ಯಾಂಡ್ ಅಕ್ವಿಸಿಷನ್ ಹಾಗೂ ಇನ್ನಿತರ ಕಾರಣಗಳಿಗಾಗಿ ಇಲ್ಲಿ ಒದಗಿಸಿದ ಹಣವನ್ನು ಖರ್ಚು ಮಾಡಲಾಗಲಿಲ್ಲ. ಇದರಿಂದ ಸ್ವಲ್ಪಮಟ್ಟಿನ ದಿಲೇ ಆಗಿದೆ ಅಷ್ಟೇ.

Payment of Rent of Primary School Buildings in Belgaum City

77. Sri B. B. SAYANAK (Belgaum).—

Will the Minister for Education be pleased to state :—

(*a*) the number of primary schools in Belgaum City Municipality which are housed in rented buildings ;

(*b*) whether it it a fact that the rent due has not been paid to the owners of the building for the last 6 to 8 months ;